**Government of Karnataka**
**Deposition Sheet (R.P.N.57) Form 4 Criminal**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 317/2018 |

ದಿನಾಂಕ 29-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 1 ಪ್ರಾಸಾಃ 2

| | |
|---|---|
| ಹೆಸರು | ಸೂಗಣ್ಣ ಮಿಟ್ಟಿ |
| ತಂದೆಯ ಹೆಸರು | ಜಂಬಣ್ಣ ಮಿಟ್ಟಿ |
| ವಯಸ್ಸು | 35 ವರ್ಷ |
| ಉದ್ಯೋಗ | ಡಿ ಆರ್ ಎಫ್ ಓ ರಾಯಚೂರು ವಲಯ |
| ವಾಸಸ್ಥಳ | ರಾಯಚೂರು |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ: -**

ನಾನು ದೇವದುರ್ಗ ಅರಣ್ಯ ವಲಯದಲ್ಲಿ 2016 ರಿಂದ 2019 ರವರೆಗೆ ಕೆಲಸ ಮಾಡಿದ್ದೇನೆ.

ದಿನಾಂಕ: 29-06-2017 ರಂದು ಬೆಳಿಗ್ಗೆ 6-30 ಗಂಟೆಗೆ ನನಗೆ ಮಾಹಿತಿ ಬಂದಿದ್ದೇನೆಂದರೆ, ದೇವದುರ್ಗ ಶಹಾಪುರ ರಸ್ತೆಯಲ್ಲಿ ಮುಳ್ಳ ಹಂದಿಯನ್ನು ಬೇಟಿಯಾಡಿರುತ್ತಾರೆಂದು ಮಾಹಿತಿ ಬಂದಿದ್ದು ಆ ಮೇರೆಗೆ ನಾನು ನಮ್ಮ ಸಿಬ್ಬಂದಿಗೆ ತಿಳಿಸಿದ್ದು, ನಾವು ಸಿಬ್ಬಂದಿ 5-6 ಜನರು ಸೇರಿ ದೇವದುರ್ಗ ಪಟ್ಟಣದ ಹಜರತ್ ಜಹಿರುದ್ದೀನ್ ಪಾಷಾ ದರ್ಗಾದ ಹತ್ತಿರ ಹೋಗಿದ್ದೇವು. ಆಗ ಬೆಳಿಗ್ಗೆ 7-30 ಗಂಟೆಗೆ ಒಂದು ಬಿಳಿ ಬಣ್ಣದ ಕ್ರಷರ್ ವಾಹನದ ಸಂಖ್ಯೆ ಕೆ ಎ 23, ಎನ್ 0374 ನೇದ್ದರಲ್ಲಿ

ಶಹಾಪುರ ಕಡೆಯಿಂದ ಮುಳ್ಳು ಹಂದಿಗಳನ್ನು ಭೇಟೆಯಾಡಿಕೊಂಡು ಬರುತ್ತಿದ್ದರು. ಹಜರತ್ ಜಹಿರುದ್ದೀನ್ ಪಾಷಾ ದರ್ಗಾದ ಹತ್ತಿರ ತಡೆದು ನಿಲ್ಲಿಸಿ ವಾಹನವನ್ನು ತಪಾಸಣೆ ಮಾಡಿದಾಗ ಅದರಲ್ಲಿ ಒಬ್ಬ ಚಾಲಕ ಮತ್ತು 13 ಜನ ಅಸಾಮಿಗಳು ಒಟ್ಟು 14 ಜನ ಇದ್ದರು. ವಾಹನ ಪರಿಶೀಲನೆ ಮಾಡಿದಾಗ, ಪೂರ್ಣ ಬೆಂದಿರುವ ಮುಳ್ಳು ಹಂದಿ 6, ಅರೆ ಬರೆ ಬೆಂದಿರುವ ಮುಳ್ಳು ಹಂದಿಯ ಮೃತ ದೇಹ 03 ಇದ್ದವು. ಒಟ್ಟು 09 ಮುಳ್ಳು ಹಂದಿಯ ಮೃತ ದೇಹಗಳು ಇದ್ದವು. ಕೃತ್ಯಕ್ಕೆ ಬಳಿಸಿದ 8 ಕೋಲು, 6 ಟಾರ್ಚ್ ಲೈಟ್ , 3 ಹಗ್ಗಗಳು, ಸಿಕ್ಕಿರುತ್ತವೆ. ಆ ಅಸಾಮಿಗಳ ಹೆಸರು ವಿಚಾರಸಲಾಗಿ ಅವರ ಹೆಸರು ಮಾನಶೆಪ್ಪ, ಸಿದ್ದಪ್ಪ, ವೆಂಕಟೇಶ, ರವಿ, ಮೌನೇಶ, ಶಿವು, ಚನ್ನಬಸವ, ಚಾಲಕ ಸುರೇಶ, ಇನ್ನೂಳಿದವರ ಹೆಸರು ನನಗೆ ನೆನಪಿರುವುದಿಲ್ಲ. ಕ್ರಷರ್ ಚಾಲಕನ ಹೆಸರು ಸುರೇಶ ಎಂದು ತಿಳಿಸಿದ್ದು, ಆಸಾಮಿಗಳನ್ನು ವಿಚಾರ ಮಾಡಲಾಗಿ ಶಹಾಪುರ ಮೀಸಲು ಅರಣ್ಯ ಪ್ರದೇಶದಿಂದ ಮಾಂಸ ತಿನ್ನುವ ಉದ್ದೇಶದಿಂದ ಮುಳ್ಳು ಹಂದಿಗಳನ್ನು ಬೇಟೆಯಾಡಿರುವುದಾಗಿ ಹೇಳಿರುತ್ತಾರೆ.

ಸ್ಥಳದಲ್ಲಿ ಮಹಜರನ್ನು ಬೆಳಿಗ್ಗೆ 7-30 ರಿಂದ 8-30 ಗಂಟೆಯವರೆಗೆ ಮಾಡಿರುತ್ತೇವೆ. ಸಾಕ್ಷಿ ಮಹಜರಿಗೆ ಸಹಿ ಮಾಡಿದ್ದು ಮಹಜರನ್ನು ನೋಡಿ ಗುರುತಿಸಿದ್ದು ನಿ ಪಿ 1 ಎಂದು, ಸಾಕ್ಷಿದಾರರ ಸಹಿಯನ್ನು ನಿ ಪಿ 1(ಬಿ) ಎಂದು ಗುರುತಿಸಲಾಯಿತು. ಮೃತ 9 ಮುಳ್ಳು ಹಂದಿಗಳನ್ನು ಪೋಸ್ಟ್ ಮಾರ್ಟ್‌ಮ ಗೆ ಕಳುಹಿಸಿಕೊಟ್ಟಿರುತ್ತೇವೆ. ನಂತರ ಆರೋಪಿತರ ಮತ್ತು ವಾಹನ ಹಾಗೂ ಮೃತ 9 ಮುಳ್ಳು ಹಂದಿಗಳ ಮೃತ ದೇಹದ ಪೋಸ್ಟ್ ಮಾರ್ಟ್‌ಮ್ ಮಾಡುವಾಗ 12 ಛಾಯಾ ಚಿತ್ರಗಳನ್ನು ತೆಗೆಸಲಾಯಿತು. ಸಾಕ್ಷಿದಾರರು ಸದರಿ ಛಾಯಾ ಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಕ್ರಮವಾಗಿ ಈಗಾಗಲೇ ನಿ ಪಿ 3 ರಿಂದ 13 ಎಂದು ಗುರುತಿಸಲಾಯಿತು. 14 ಜನ ಆಸಾಮಿಗಳನ್ನು ನೋಟಿಸ್ ಮಾಡಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂದನಕ್ಕೆ ಒಳಪಡಿಸಿ ರಾಯಚೂರು ಕಾರಾಗೃಹಕ್ಕೆ ಕಳುಹಿಸಿರುತ್ತೇವೆ.

**ವಾಟೀಸವಾಲು: ಆರೋಪತರ ಪರ ಶ್ರೀ ಎಸ್.ಎಮ್.ಆರ್. ವಕೀಲರಿಂದ:-**

1. ಆ ದಿನ ಬಾತ್ಮೀ ಮೌನೇಶ ಎನ್ನುವವರಿಂದ ಬೆಳಿಗ್ಗೆ 5-30 ಗಂಟೆಗೆ ಮಾಹಿತಿ ಬಂದಿರುತ್ತದೆ. ನಾನು ಬೆಳಿಗ್ಗೆ 6-00 ಗಂಟೆಗೆ ಜಾಲಹಳ್ಳಿ ಬಿಟ್ಟು 10 ನಿಮಿಷಕ್ಕೆ ಸ್ಥಳಕ್ಕೆ ಬಂದಿರುತ್ತೇನೆ. ಸ್ಥಳಕ್ಕೆ ಬಂದು ಆರೋಪಿತರು ಸಿಕ್ಕಿದ ಮೇಲೆ ಮಹಜರನ್ನು ಮಾಡಿರುತ್ತೇವೆ. ದಿನಾಂಕ: 29-06-2017 ರಂದು ಬೆಳಿಗ್ಗೆ 6-00 ಗಂಟೆಗೆ ಮಾಹಿತಿ ಬಂದ ಮೇಲೆ ನೀವು ಜಾಲಹಳ್ಳಿ ಬಿಟ್ಟು ಸ್ಥಳಕ್ಕೆ ಹೋಗಿದ್ದೀರಿ ಎಂದು ಸುಳ್ಳು ಹೇಲುತ್ತಿದ್ದೀರಿ ಎಂದರೆ ಸರಿಯಲ್ಲ. ನಿವೆಲ್ಲರೂ ಸೇರಿ ಸ್ಥಳದಲ್ಲಿ ಪಂಚನಾಮೆ ಮಾಡಿದ್ದೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದೇವದುರ್ಗ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ವನ್ಯ ಜೀವಿಗಳ ಹತ್ಯೆ ಮಾಡಿದರೆ ದೇವದುರ್ಗ ಅರಣ್ಯ ಇಲಾಖೆ ವ್ಯಾಪ್ತಿಯಲ್ಲಿ ಕ್ರಮತೆಗೆದುಕೊಳ್ಳಲು ಬರುತ್ತದೆ ಎಂದರೆ ಸರಿ. 9 ಮುಳ್ಳು ಹಂದಿಗಳನ್ನು ಶಹಾಪುರ ಅರಣ್ಯ ವಲಯದಲ್ಲಿ ಸಾಯಿಸಿರುತ್ತಾರೆ. ಶಹಾಪುರ ಅರಣ್ಯ ವ್ಯಾಪ್ತಿಯ ಅಧಿಕಾರಿಗಳಿಗೆ ಕ್ರಮ ತೆಗೆದುಕೊಳ್ಳುವ ಅಧಿಕಾರ ಇದೆ ಎಂದರೆ ಸರಿ. ಶಹಾಪುರ ಅರಣ್ಯ ವಲಯ ಅಧಿಕಾರಿಗಳಿಂದ ಆರೋಪಿತರ ವಿರುದ್ದ ಯಾವುದೇ ಕ್ರಮ ಜರುಗಿಸಿಲ್ಲ ಎಂದರೆ ಸರಿ. ಆರೋಪಿತರು 9 ಮುಳ್ಳು ಹಂದಿಗಳನ್ನು ಶಹಾಪುರ ಅರಣ್ಯ ವಲಯದ ವ್ಯಾಪ್ತಿಯಲ್ಲಿ ಹತ್ಯೆ ಮಾಡಿದ್ದಾರೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಕಾಡು ಹಂದಿ ಮತ್ತು ಸಾಕು ಹಂದಿ ಗಳನ್ನು ಜೀವಂತವಾಗಿದ್ದಾಗ ಮಾತ್ರ ಗುರುತು ಹಿಡಿಲು ಆಗುತ್ತದೆ ಎಂದರೆ ಸರಿಯಲ್ಲ. ಸತ್ತಿರುವ 9 ಮುಳ್ಳು ಹಂದಿಗಳ ಪೈಕಿ 5 ಗಂಡು ಮತ್ತು 4 ಹೆಣ್ಣು ಮುಳ್ಳು ಹಂದಿಗಳ ವಯಸ್ಸು ಇದ್ದವು. ಆ 9 ಮುಳ್ಳು ಹಂದಿಗಳ ವಯಸ್ಸು ಎಷ್ಟಿತ್ತು ಎಂದರೆ ಸಾಕ್ಷಿಯು ಕೆಲವು ಮುಳ್ಳು ಹಂದಿಗಳ ವಯಸ್ಸು 1 ವರ್ಷ ಇತ್ತು ಇನ್ನೂ ಕಡಿಮೆ ಇತ್ತು ಎನ್ನುತ್ತಾರೆ. 9 ಸತ್ತಿರುವ ಮುಳ್ಳು ಹಂದಿಗಳ ವಯಸ್ಸು ಮಹಜರನಲ್ಲಿ ಬರೆದಿರುವುದಿಲ್ಲ.

2. ಮುಳ್ಳು ಹಂದಿಗಳು ಎಲ್ಲಾ ಕಾಡು ಪ್ರದೇಶಗಳಲ್ಲಿ ಸಿಗುತ್ತವೆ ಎಂದರೆ ಸಾಕ್ಷಿಯು ಉತ್ತರ ಕರ್ನಾಟಕದ ಕಾಡು ಪ್ರದೇಶದಲ್ಲಿ ಹೆಚ್ಚಾಗಿ ಸಿಗುತ್ತವೆ ಎನ್ನುತ್ತಾರೆ. ಬೆಳಿಗ್ಗೆ 7-20 ಗಂಟೆಗೆ ಆರೋಪಿತರು ಸಿಕ್ಕಿರುತ್ತಾರೆ. ಕ್ರಷರ್ ವಾಹನದ ಮೇಲೆ ಸ್ವಲ್ಪ ಜನ ಇದ್ದರು, ಕ್ರಷರ್ ವಾಹನದ ಕ್ಯಾಬಿನ್ ಒಳಗಡೆ ಸ್ವಲ್ಪ ಜನರು ಇದ್ದರು ಅವರ ಹೆಸರು ನನಗೆ ಹೇಳಲು ಆಗುವುದಿಲ್ಲ. ಕ್ರಷರ್ ಚಾಲಕ ಸುರೇಶ ಚಾಲನೆ ಮಾಡುತ್ತಿದ್ದನು. ಒಟ್ಟು 14 ಜನ ಆರೋಪಿತರ ಹೆಸರು, ಅಡ್ಡ ಹೆಸರು, ತಂದೆಯ ಹೆಸರು ಅವರ ಊರು ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿಯು ಕೆಲವು ಆರೋಪಿತರ ಹೆಸರು ಊರಿನ ಹೆಸರು ಗೊತ್ತಿದೆ. ಇನ್ನೂಳಿದ ವರ ಹೆಸರು ಗೊತ್ತಿಲ್ಲ ಎನ್ನುತ್ತಾರೆ. ಸ್ಥಳದಲ್ಲಿ ಕ್ರಷರ್ ವಾಹನ ಮತ್ತು ಮುಳ್ಳು ಹಂದಿ ಸಿಕ್ಕಿರುವ ಬಗ್ಗೆ ಮಹಜರ ಮಾಡಿದ್ದೀರಾ ಎಂದರೆ ಸಾಕ್ಷಿಯು ಮಾಡಿದ್ದಾರೆ ಎನ್ನುತ್ತಾರೆ. ನಿ ಪಿ 1 ಪಂಚನಾಮೆಗೆ ನಾನು, ಚಾಸಾ-2 ರಿಂದ 4 ಮತ್ತು ಮೌನೇಶರವರು ಸಹಿ ಮಾಡಿರುತ್ತೇವೆ. ಇನ್ನೊಂದು ಮಹಜರನ್ನು ನಮ್ಮ ಅರಣ್ಯ ಕಚೇರಿಯಲ್ಲಿ 9 ಮುಳ್ಳು ಹಂದಿಗಳನ್ನು ಸುಟ್ಟಾಗ ಮಾಡಿರುತ್ತಾರೆ. ನಾನು ಆ ಸಮಯದಲ್ಲಿ ಜಾಲಹಳ್ಳಿಗೆ ಹೋಗಿರುತ್ತೇನೆ.

3. ಅನಂತಕುಮಾರರವರು ರೇಂಜ್ ಫಾರೆಸ್ಟ್ ಆಫೀಸರ್ ಆಗಿರುತ್ತಾರೆ ಅವರು ನಮ್ಮ ಮೇಲಾಧಿಕಾರಿಗಳಾಗಿರುತ್ತಾರೆ. ಕೇಸ್ ಗೆ ಸಂಬಂಧಪಟ್ಟಂತೆ ದೂರನ್ನು ಯಾರು ಕೊಟ್ಟಿದ್ದಾರೆ ನಿಮಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿಯು ಎ ಎಮ್ ಫಾಕಿರ ರೇಂಜ್ ಫಾರೆಸ್ಟ್ ಆಫೀಸ್‌ರವರು ಕೊಟ್ಟಿರುತ್ತಾರೆ ಎನ್ನುತ್ತಾರೆ. ದೂರಿನ ಬಗ್ಗೆ ಮಾಹಿತಿ ಯಾರು ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ಎ ಎಮ್ ಫಾಕಿರ ನಮ್ಮ ಮೇಲಾಧಿಕಾರಿಗಳು ಎಂದರೆ ಸರಿ. 29-06-2017 ರಂದು ದೇವದುರ್ಗ ಪಟ್ಟಣ ಜಹಿರುದ್ದೀನ್ ಪಾಷಾ ದರ್ಗಾದ ಹತ್ತಿರ ಒಂದು ಕ್ರಷರ ವಾಹನ ಬಂದಿತ್ತು ಅದರಲ್ಲಿ 9 ಮುಳ್ಳ ಹಂದಿಗಳ ದೇಹ ಇತ್ತು ಅದನ್ನು ಪಂಚನಾಮೆ ಮಾಡಿದ್ದೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ ಕ್ರಷರ ವಾಹನ ಚಾಲಕ ಸುರೇಶ ಇದ್ದ ಎಂದು ಸುಳ್ಳು

ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಕ್ರಷರ್ ವಾಹನದಲ್ಲಿ 3 ಹಗ್ಗ, 8 ಬಡಿಗೆ, 6 ಟಾರ್ಚ್ ಗಳು ಇದ್ದವು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಕ್ರಷರ ವಾಹನದ ಮಾಲೀಕರು ಯಾರು ಆಗಿದ್ದರು ಎಂದು ನಮ್ಮ ಮೇಲಾಧಿಕಾರಿಗಳು ವಿಚಾರ ಮಾಡಿರುತ್ತಾರೆ. 9 ಮುಳ್ಳು ಹಂದಿಗಳನ್ನು 14 ಜನರು ಭೇಟೆಯಾಡಿರುವ ವಿಷಯ ಸುಳ್ಳು ಆಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಅಪರಾಧ ಮಾಡದೆ ಇದ್ದರು ಸುಳ್ಳು ದೂರು ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಅರಣ್ಯ ಇಲಾಖೆ ಅಧಿಕಾರ ವ್ಯಾಪ್ತಿಯಲ್ಲಿ ಬರದೆ ಇದ್ದರು ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ದೂರು ಕೊಟ್ಟಿದ್ದೀರಿ ಎಂದರೆ ಸರಿಯಲ್ಲ. 8 ಕಟ್ಟಿಗೆಗಳು ಬಿದರಿನ ಕೋಲುಗಳಾಗಿರುತ್ತವೆ. ಆ 8 ಕಟ್ಟಿಗೆಗಳು ಬಿದರಿನ ಕಟ್ಟಿಗೆಗಳು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಹಗ್ಗವು ಯಾವ ಬಣ್ಣದು ಇತ್ತು ಎಂದರೆ ಸಾಕ್ಷಿಯು ಪ್ಲಾಸ್ಟಿಕ್ ಹಗ್ಗಗಳಾಗಿದ್ದವು ಎನ್ನುತ್ತಾರೆ. ಈ ಪ್ರಕರಣದಲ್ಲಿ ನಿಮಗೆ ಯಾವುದೇ ಸರಿಯಾದ ಮಾಹಿತಿ ಇರದೇ ಇದ್ದರೂ ನಿಮ್ಮ ಮೇಲಾಧಿಕಾರಿಗಳ ಮಾಹಿತಿ ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ

**Government of Karnataka**
**Deposition Sheet (R.P.N.57) Form 4 Criminal**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ**

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 317/2018 |

ದಿನಾಂಕ 29-04-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 3 ಪ್ರಾಸಾಃ 1

| | |
|---|---|
| ಹೆಸರು | ನಾರಾಯಣ |
| ತಂದೆಯ ಹೆಸರು | ಲಕ್ಷ್ಮಣ |
| ವಯಸ್ಸು | 35 ವರ್ಷ |
| ಉದ್ಯೋಗ | ಅರಣ್ಯ ರಕ್ಷಕರು |
| ವಾಸಸ್ಥಳ | ನಾರದಗಡ್ಡೆ ಬುರ್ದಿಪಾಡ , ತಾ ಜಿ ರಾಯಚೂರು |

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ. ರವರಿಂದ: -**

ನಾನು ದೇವದುರ್ಗ ಅರಣ್ಯ ವಲಯದಲ್ಲಿ ಸುಮಾರು 6 ತಿಂಗಳು ಅರಣ್ಯ ವೀಕ್ಷಕರು ಎಂದು ಕೆಲಸ ಮಾಡಿದ್ದೇನೆ.

ದಿನಾಂಕ: 29-06-2017 ರಂದು ಬೆಳಿಗ್ಗೆ 6-30 ಗಂಟೆಗೆ ಚಾಸಾ-1 ರವರಿಗೆ ಮಾಹಿತಿ ಬಂದಿದ್ದೇನೆಂದರೆ, ದೇವದುರ್ಗ ಶಹಾಪುರ ರಸ್ತೆಯಲ್ಲಿ ಮುಳ್ಳ ಹಂದಿಯನ್ನು ಬೇಟೆಯಾಡಿರುತ್ತಾರೆಂದು ಮಾಹಿತಿ ಬಂದಿದ್ದು ಆ ಮೇರೆಗೆ ಅವರು ನಮಗೆ ತಿಳಿಸಿದ್ದು, ನಾವು ಸಿಬ್ಬಂದಿ 5-6 ಜನರು ಸೇರಿ ದೇವದುರ್ಗ ಪಟ್ಟಣದ ಹಜರತ್ ಜಹಿರುದ್ದೀನ್ ಪಾಷಾ ದರ್ಗಾದ ಹತ್ತಿರ ಹೋಗಿದ್ದೇವು. ಆಗ ಬೆಳಿಗ್ಗೆ 7-30 ಗಂಟೆಗೆ ಒಂದು ಬಿಳಿ ಬಣ್ಣದ ಕ್ರಷರ್ ವಾಹನದ ಸಂಖ್ಯೆ ಕೆ ಎ 23, ಎನ್ 0374 ನೇದ್ದರಲ್ಲಿ

ಶಹಾಪುರ ಕಡೆಯಿಂದ ಮುಳ್ಳು ಹಂದಿಗಳನ್ನು ಭೇಟೆಯಾಡಿಕೊಂಡು ಬರುತ್ತಿದ್ದರು. ಹಜರತ್ ಜಹಿರುದ್ದೀನ್ ಪಾಷಾ ದರ್ಗಾದ ಹತ್ತಿರ ತಡೆದು ನಿಲ್ಲಿಸಿ ವಾಹನವನ್ನು ತಪಾಸಣೆ ಮಾಡಿದಾಗ ಅದರಲ್ಲಿ ಒಬ್ಬ ಚಾಲಕ ಮತ್ತು 13 ಜನ ಅಸಾಮಿಗಳು ಒಟ್ಟು 14 ಜನ ಇದ್ದರು. ವಾಹನ ಪರಿಶೀಲನೆ ಮಾಡಿದಾಗ, ಪೂರ್ಣ ಬೆಂದಿರುವ ಮುಳ್ಳು ಹಂದಿ 6, ಅರೆ ಬರೆ ಬೆಂದಿರುವ ಮುಳ್ಳು ಹಂದಿಯ ಮೃತ ದೇಹ 03 ಇದ್ದವು. ಒಟ್ಟು 09 ಮುಳ್ಳು ಹಂದಿಯ ಮೃತ ದೇಹಗಳು ಇದ್ದವು. ಕೃತ್ಯಕ್ಕೆ ಬಳಿಸಿದ ಕೋಲು, 6 ಟಾರ್ಚ್ ಲೈಟ್ , 3 ಹಗ್ಗಗಳು ಸಿಕ್ಕಿರುತ್ತವೆ. ಆ ಅಸಾಮಿಗಳ ಹೆಸರು ವಿಚಾರಸಲಾಗಿ ಅವರ ಹೆಸರು ಮಾನಶೆಪ್ಪ, ಸಿದ್ದಪ್ಪ, ವೆಂಕಟೇಶ, ರವಿ, ಶಿವು, ಚನ್ನಬಸವ, ಇನ್ನೂಳಿದವರ ಹೆಸರು ನನಗೆ ನೆನಪಿರುವುದಿಲ್ಲ. ಕ್ರಷರ್ ಚಾಲಕನ ಹೆಸರು ಸುರೇಶ ಎಂದು ತಿಳಿಸಿದ್ದು, ಆಸಾಮಿಗಳನ್ನು ವಿಚಾರ ಮಾಡಲಾಗಿ ಶಹಾಪುರ ಮೀಸಲು ಅರಣ್ಯ ಪ್ರದೇಶದಿಂದ ಮಾಂಸ ತಿನ್ನುವ ಉದ್ದೇಶದಿಂದ ಮುಳ್ಳು ಹಂದಿಗಳನ್ನು ಬೇಟೆಯಾಡಿರುವುದಾಗಿ ಹೇಳಿರುತ್ತಾರೆ.

ಸ್ಥಳದಲ್ಲಿ ಮಹಜರನ್ನು ಬೆಳಿಗ್ಗೆ 7-30 ರಿಂದ 8-30 ಗಂಟೆಯವರೆಗೆ ಮಾಡಿರುತ್ತೇವೆ. ಸಾಕ್ಷಿ ಮಹಜರಿಗೆ ಸಹಿ ಮಾಡಿದ್ದು ಮಹಜರನ್ನು ನೋಡಿ ಗುರುತಿಸಿದ್ದು ನಿ ಪಿ 1 ಎಂದು, ಸಾಕ್ಷಿದಾರರ ಸಹಿಯನ್ನು ನಿ ಪಿ 1(ಎ) ಎಂದು ಗುರುತಿಸಲಾಯಿತು. ಮೃತ 9 ಮುಳ್ಳು ಹಂದಿಗಳನ್ನು ಪೋಸ್ಟ್ ಮಾರ್ಟ್ಮ ಗೆ ಕಳುಹಿಸಿಕೊಟ್ಟಿರುತ್ತೇವೆ. ಸಾಕ್ಷಿ ಇನ್ನೊಂದು ಮಹಜರನ್ನು ನೋಡಿ ಗುರುತಿಸಿದ್ದು, ಅದನ್ನು ನಿ ಪಿ 2 ಎಂದು, ಸಾಕ್ಷಿದಾರರ ಸಹಿಯನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು. ನಂತರ ಆರೋಪಿತರ ಮತ್ತು ವಾಹನ ಹಾಗೂ ಮೃತ 9 ಮುಳ್ಳು ಹಂದಿಗಳ ಮೃತ ದೇಹದ ಪೋಸ್ಟ್ ಮಾರ್ಟ್ಮ್ ಮಾಡುವಾಗ 12 ಛಾಯಾ ಚಿತ್ರಗಳನ್ನು ತೆಗೆಸಲಾಯಿತು. ಸಾಕ್ಷಿದಾರರು ಸದರಿ ಛಾಯಾ ಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಕ್ರಮವಾಗಿ ನಿ ಪಿ 3 ರಿಂದ 13 ಎಂದು ಗುರುತಿಸಲಾಯಿತು. 14 ಜನ ಆಸಾಮಿಗಳನ್ನು ನೋಟಿಸ್ ಮಾಡಿ ಮಾನ್ಯ ನ್ಯಾಯಾಲಯಕ್ಕೆ

ಹಾಜರುಪಡಿಸಿರುತ್ತೇವೆ. 14 ಜನ ಆಸಾಮಿಯರನ್ನು ನೋಡಿ ಬಹಳ ವರ್ಷಗಳಾಗಿರುವುದರಿಂದ ಕೆಲವರನ್ನು ನೋಡಿ ಸಾಕ್ಷಿದಾರರು ಆರೋಪಿ 1, 5 ಮತ್ತು 14 ರವರನ್ನು ನೋಡಿ ಗುರುತಿಸಿರುತ್ತಾರೆ. ಉಳಿದ ಆರೋಪಿಗಳು ಗೈರು ಹಾಜರು ಇದ್ದು, ಗುರುತಿಸಲು ಯಾವುದೆ ತಕರಾರು ಇಲ್ಲ ಎಂದು ಸೂಚಿಸಿರುತ್ತಾರೆ.

**ಪಾಟೀಸವಾಲು: ಆರೋಪತರ ಪರ ಶ್ರೀ ಎಸ್.ಎಮ್.ಆರ್. ವಕೀಲರಿಂದ:-**

1. ಗುಲಬರ್ಗಾ ವಿಭಾಗದ ಅರಣ್ಯ ಪ್ರದೇಶಗಳಲ್ಲಿ ಇಂತಹ ಮುಳ್ಳು ಹಂದಿಯ ಜಾತಿಯ ಪ್ರಾಣಿಗಳು ಸಿಗುವುದಿಲ್ಲ ಎಂದರೆ ಸರಿಯಲ್ಲ. ಇಂತಹ ಮುಳ್ಳು ಹಂದಿಯ ಪ್ರಾಣಿಗಳು ಅತಿ ಹೆಚ್ಚು ಆಂದ್ರ ಪ್ರಧೇಶದಲ್ಲಿ ಕಂಡು ಬರುತ್ತವೆ ಎಂದರೆ ಸಾಕ್ಷಿಯು ಇಲ್ಲಯೂ ಕಂಡು ಬರುತ್ತವೆ ಎನ್ನುತ್ತಾರೆ. ಕಾಡು ಹಂದಿ ಮತ್ತು ಸಾಕು ಹಂದಿ ಗಳನ್ನು ಜೀವಂತವಾಗಿದ್ದಾಗ ಮಾತ್ರ ಗುರುತು ಹಿಡಿಲು ಆಗುತ್ತದೆ ಎಂದರೆ ಸರಿಯಲ್ಲ. 9 ಸತ್ತಿರುವ ಮುಳ್ಳು ಹಂದಿಗಳ ವಯಸ್ಸು ಎಷ್ಟು ಇರಬ ಹುದು ಎಂದು ನನಗೆ ಹೇಳಲು ಬರುವುದಿಲ್ಲ. ಮುಳ್ಳು ಹಂದಿಗಳ ಹಲ್ಲುಗಳು ಮುಚ್ಚಿರುತ್ತವೆ ನಮಗೆ ಹೊರಗಿನಿಂದ ಕಾಣುವುದಿಲ್ಲ. ಕಾಡು ಹಂದಿಗಳ ಹಲ್ಲುಗಳು ಹೊರಗಿನಿಂದ ಕಾಣುತ್ತವೆ ಎಂದರೆ ಸಾಕ್ಷಿಯು ಅವುಗಳ ಜಾತಿ ಮತ್ತು ವಯಸ್ಸು ಹೆಚ್ಚಾದರೆ ಹೊರಗಿನಿಂದ ಕಾಣುತ್ತವೆ ಎನ್ನುತ್ತಾರೆ. ಸತ್ತಿರುವ ಪ್ರಾಣಿಗಳು ಕಾಡು ಹಂದಿಗಳಾಗಿರುತ್ತವೆ ಎಂದರೆ ಸಾಕ್ಷಿಯು ಇವು ಕಾಡಿನಲ್ಲಿ ಸಿಗುವ ಮುಳ್ಳು ಹಂದಿಗಳಾಗಿರುತ್ತವೆ ಎನ್ನುತ್ತಾರೆ.

2. ಯಾವ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಪ್ರಾಣಿಗಳನ್ನು ಭೇಟಿಯಾಡಿರುತ್ತಾರೋ ಆ ಅರಣ್ಯ ಪ್ರದೇಶದ ಅಧಿಕಾರಿಗಳಿಗೆ ಕ್ರಮ ತೆಗೆದುಕೊಳ್ಳಲು ಅಧಿಕಾರ ಇರುತ್ತದೆ ಎಂದರೆ ಸಾಕ್ಷಿಯು ಹೌದು ದೇವದುರ್ಗ ವ್ಯಾಪ್ತಿಯಲ್ಲಿ ಮುಳ್ಳು ಹಂದಿಗಳು ಸಿಕ್ಕಿರುವುದರಿಂದ ನಮಗೂ ವ್ಯಾಪ್ತಿ ಇದೆ ಎನ್ನುತ್ತಾರೆ. ನಿಮ್ಮ ಮೇಲಾಧಿಕಾರಿಗಳು ಶಹಾಪುರ ಅರಣ್ಯ ವಲಯದ ಅಧಿಕಾರಿಗಳಿಗೆ ಈ ಪ್ರಕರಣದ ಬಗ್ಗೆ

ಮಾಹಿತಿಯನ್ನು ಕೊಟ್ಟಿದ್ದಾರೆಯೇ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ದಿನಾಂಕ: 29-06-2017 ರಂದು ಬೆಳಿಗ್ಗೆ 7-30 ಕ್ಕೆ ಈ ಪ್ರಕರಣದ ದೂರನ್ನು ನಮ್ಮ ಮೇಲಾಧಿಕಾರಿಗಳಾದ ಮೌನೇಶ ರವರು ಮಾಡಿರುತ್ತಾರೆ. ದೂರನ್ನು ಕೈ ಬರವಣಿಗೆಲ್ಲಿ ಮಾಡಿರುತ್ತಾರೆ. ದೂರಿನ ಮೇಲೆ ನಮ್ಮ ಅಧಿಕಾರಿಗಳಾದ ಚಾಸಾ-1 ರವರು ಸಹಿ ಮಾಡಿರುತ್ತಾರೆ. ದೂರಿನ ಮೇಲೆ ಯಾರು ಯಾರು ಸಹಿ ಮಾಡಿರುತ್ತಾರೆ ನನಗೆ ನೆನಪಿಲ್ಲ.

3. ಮಹಜರನ್ನು ಪಂಚರು ಹೇಳಿದಂತೆ ಮಾಡಿರುತ್ತಾರೆ. ಪಂಚನಾಮೆಗೆ ಪಂಚರು ಸಹಿ ಮಾಡಲು ಒಪ್ಪಲಿಲ್ಲ ಹಾಗಾಗಿ ನಾವು ಸಿಬ್ಬಂದಿಯವರು ಸಹಿ ಮಾಡಿರುತ್ತೇವೆ. ಪಂಚನಾಮೆಗೆ ಪಂಚರು ಸಹಿ ಮಾಡಿರುವುದಿಲ್ಲ. ಪಂಚನಾಮೆ ಯಾರು ಮಾಡಿದರು ಎಂದು ಅವರ ಹೆಸರು ನನಗೆ ನೆನಪಿಲ್ಲ. ಛಾಯಾ ಚಿತ್ರ ತೆಗೆದ ಸ್ಥಳದ ಚಕ್‌ಬಂದಿ ನನಗೆ ಹೇಳಲು ಆಗುವುದಿಲ್ಲ. ಫೋಟೋ ತೆಗೆದ ಕ್ಯಾಮರಮೆನ್ ಹೆಸರು ನೆನಪಿಲ್ಲ. ಮುಳ್ಳು ಹಂದಿಯ ಪೋಸ್ಟ್ ಮಾರ್ಟಮ್ ಮಾಡಿದ ವೈದ್ಯಾಧಿಕಾರಿ ಹೆಸರು ನೆನಪಿಲ್ಲ. ಮೃತ ಮುಳ್ಳು ಹಂದಿಗಳಲ್ಲಿ ಎಷ್ಟು ಹೆಣ್ಣು ಎಷ್ಟು ಗಂಡು ಮುಳ್ಳು ಹಂದಿಗಳು ಇದ್ದವು ಎಂದು ಮಾಹಿತ ಇದೆ ಆದರೆ ಈಗ ನನಗೆ ನೆನಪಿಲ್ಲ. ಶಹಾಪುರ ದಿಂದ ದೇವದುರ್ಗ ರಸ್ತೆಯಲ್ಲಿ ಬಸ್ ನ ವ್ಯವಸ್ಥೆ ಸರಿಯಾಗಿಲ್ಲದೆ ಇರುವುದರಿಂದ ಜನರು ಕ್ರಷರ್ ವಾಹನದಲ್ಲಿ ಓಡಾಡುತ್ತಾರೆಂದರೆ ಸರಿ. ನಿ ಪಿ 3 ಛಾಯಾ ಚಿತ್ರವನ್ನು ಜಹಿರುದ್ದೀನ್ ಪಾಶಾ ದರ್ಗಾದ ಹತ್ತಿರ ತೆಗೆಸಿರುವುದಿಲ್ಲ ನಿಮ್ಮ ಕಚೇರಿಯ ಹತ್ತಿರ ತೆಗೆಸಿದ ಛಾಯಾ ಚಿತ್ರ ಆಗಿರುತ್ತದೆ ಎಂದರೆ ಸರಿ. ಮಹಜರ 2 ಪುಟದಿತ್ತು ನಾನು 3ನೇ ಪುಟಕ್ಕೆ ಸಹಿ ಮಅಡಿರುತ್ತೇನೆ. ನಾನು 2 ಮಹಜರಗೆ 2 ಸಹಿ ಮಾಡಿರುತ್ತೇನೆ. 1 ಮಹಜರನ್ನು ಬೆಳಿಗ್ಗೆ 7-30 ರಿಂದ 8-30 ರವರೆಗೆ ಮಾಡಿರುತ್ತಾರೆ. ಇನ್ನೊಂದು ಮಹಜರನ್ನು ಮಾಡಿದ ಸಮಯ ನನಗೆ ನೆನಪಿಲ್ಲ. ಚಾಲಕ ಸುರೇಶನ ತಂದೆಯ ಹೆಸರು ಮತ್ತು ವಿಳಾಸ ಈಗ ನನಗೆ ಹೇಳಲು ಆಗುವುದಿಲ್ಲ. ಇನ್ನೂಳಿದ 13 ಜನ ಆರೋಪಿತರ ತಂದೆಯ ಹೆಸರು ಸಂಪೂರ್ಣ ವಿಳಾಸ ನನಗೆ ಹೇಳಲು ಆಗುವುದಿಲ್ಲ.

4. ಸತ್ತಿರುವ ಮುಳ್ಳು ಹಂದಿಗಳ ಮರಣೋತ್ತರ ಪರೀಕ್ಷೆಯನ್ನು ನಮ್ಮ ಕಚೇರಿಯ ಪಕ್ಕದ ಅರಣ್ಯ ಪ್ರದೇಶದಲ್ಲಿ ಪಶುವೈದ್ಯಾಧಿಕಾರಿಗಳು ಬಂದು ಮಾಡಿರುತ್ತಾರೆ. ನಂತರ ಮುಳ್ಳು ಹಂದಿಗಳನ್ನು ಸುಟ್ಟಿರುತ್ತೇವೆ. ಸುಟ್ಟು ನಾಶಪಡಿಸಿದ ಬಗ್ಗೆ ಛಾಯಾ ಚಿತ್ರವನ್ನು ತೆಗೆದಿರುತ್ತಾರೆ. ಹಜರತ್ ಜಹಿರುದ್ದೀನ್ ಪಾಷಾ ದರ್ಗಾದ ಹತ್ತಿರ ಇರುವ ಪೂರ್ವ ದಿಕ್ಕಿನ ರಸ್ತೆಯಲ್ಲಿ ನಾವು ನಿಂತಿದ್ದೇವು. ಕ್ರಷರ್ ವಾಹನದ ಮೇಲೆ ಸ್ವಲ್ಪ ಜನ ಇದ್ದರು, ಕ್ರಷರ್ ವಾಹನದ ಕ್ಯಾಬಿನ್ ಒಳಗಡೆ ಸ್ವಲ್ಪ ಜನರು ಇದ್ದರು ಅವರ ಹೆಸರು ನನಗೆ ಹೇಳಲು ಆಗುವುದಿಲ್ಲ. ಕ್ರಷರ್ ಚಾಲಕ ಸುರೇಶ ಚಾಲನೆ ಮಾಡುತ್ತಿದ್ದನು ಎಂದು ಛಾಯಾ ಚಿತ್ರವನ್ನು ತೆಗೆದಿರುವುದಿಲ್ಲ. ಕ್ರಷರ್ ವಾಹನದ ಮುಂದೆ ಮತ್ತು ಹಿಂದೆ ಬೋರ್ಡ್ ಬರೆದಿತ್ತಾ ಎಂದರೆ ಸಾಕ್ಷಿಯು ನೆನಪಿಲ್ಲ ಎನ್ನುತ್ತಾರೆ. ಕ್ರಷರ ವಾಹನದ ನೊಂದಣಿ ಸಂಖ್ಯೆ ಕೆ ಎ 23, 0374 ಇತ್ತು. ನಂಬರ್ ಎಷ್ಟೇ ಇತ್ತು. ಕ್ರಷರ್ ವಾಹನ ಯಾವ ಜಿಲ್ಲೆಯ ಪಾಸಿಂಗ್ ಇತ್ತು ಎಮದು ನನಗೆ ನೆನಪಿಲ್ಲ. ನಾನು ಸ್ಥಳಕ್ಕೆ ಆಟೋದಲ್ಲಿ ಹೋಗಿರುತ್ತೇನೆ. ನಾನು ಹೋಗುವುದಕ್ಕಿಂತ ಪೂರ್ವದಲ್ಲಿ ನಮ್ಮ ಅಧಿಕಾರಿಗಳು ಅಲ್ಲಿ ಇದ್ದರು. ನಾನು ಸ್ಥಳಕ್ಕೆ ಹೋದ ಆಟೋ ನಂಬರ್ ನನಗೆ ನೆನಪಿಲ್ಲ. ದಿನಾಂಕ: 29-06-2017 ರಂದು ಬೆಳಿಗ್ಗೆ 7-30 ಗಂಟೆಗೆ ನೀವು ದೇವದುರ್ಗ ಪಟ್ಟಣದ ಜಹಿರುದ್ದೀನ್ ಪಾಷಾ ಸರ್ಕಲ್ ನ ಹತ್ತಿರ ಹೋಗಿದ್ದೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದೇವದುರ್ಗ ಅರಣ್ಯ ವ್ಯಾಪ್ತಿಯಲ್ಲಿ 9 ಮುಳ್ಳು ಹಂದಿಗಳು ಸಾಯಿಸಿರುವುದಿಲ್ಲ ಎಂದರೆ ಸಾಕ್ಷಿಯು ಶಹಾಪುರ ಅರಣ್ಯ ಮೀಸಲು ಕ್ಷೇತ್ರದಲ್ಲಿ ಸಾಯಿಸಿ ದೇವದುರ್ಗಕ್ಕೆ ತೆಗೆದುಕೊಂಡು ಬರುತ್ತಿದ್ದರು ಎನ್ನುತ್ತಾರೆ. ದೇವದುರ್ಗ ವ್ಯಾಪ್ತಿಯಲ್ಲಿ 9 ಮುಳ್ಳು ಹಂದಿಗಳನ್ನು ಸಾಯಿಸಿಲ್ಲ ಎಂದರೆ ಸರಿ. ನಿಮ್ಮ ಅರಣ್ಯ ಇಲಾಖೆ ಅಧಿಕಾರ ವ್ಯಾಪ್ತಿಯಲ್ಲಿ ಬರದೆ ಇದ್ದರು ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ದೂರು ಕೊಟ್ಟಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ;**

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ**/-**

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ